ಸಂಖ್ಯೆ:ಸಿಬ್ಬಂದಿ(1)271/2012-13

ಜಿಲ್ಲಾಧಿಕಾರಿಗಳ ಕಛೇರಿ,
ಮಂಡ್ಯ ಜಿಲ್ಲೆ,
ಮಂಡ್ಯ ದಿನಾಂಕ:21.10.2016.

**-: ಅಧಿಕೃತ ಜ್ಞಾಪನ :-**

**ವಿಷಯ:** ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ 1:1ರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಕುರಿತು.

@@@@@

ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇದ್ದ 90 ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ದಿನಾಂಕ:31.10.2013ರಲ್ಲಿ ಅಧಿಸೂಚನೆ ಹೊರಡಿಸಿ, ಆನ್‌ಲೈನ್ ಮೂಲಕ ಅರ್ಜಿ ಕರೆಯಲಾಗಿತ್ತು, ನಂತರ ಮಂಡ್ಯ ಎನ್.ಐ.ಸಿ ರವರಿಂದ 1:5ರ ಅನುಪಾತದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪಡೆದು, ದಿನಾಂಕ:27.12.2014ರಂದು ಅಂತರ ಜಾಲದಲ್ಲಿ ಪ್ರಕಟಿಸಲಾಗಿತ್ತು.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯಂತೆ ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾದ ಅಭ್ಯರ್ಥಿಗಳನ್ನು ಅನುಸರಿಸಿ, 1:1ರ ಅನುಪಾತದ ತಾತ್ಕಾಲಿಕ ಆಯ್ಕೆಯನ್ನು ಪ್ರಕಟಿಸಲಾಗಿತ್ತು. ಸದರಿ ಆಯ್ಕೆ ಪಟ್ಟಿಯಲ್ಲಿ ಮುಕ್ತ ವಿಶ್ವವಿದ್ಯಾನಿಲಯ ನಡೆಸುವ 10+2 ಅಭ್ಯರ್ಥಿಗಳು ಸೇರ್ಪಡೆಗೊಂಡಿದ್ದರು ಹಾಗೂ ಸಿ.ಬಿ.ಎಸ್.ಸಿ ಅಭ್ಯರ್ಥಿಗಳ ಹೆಸರುಗಳು ತಾಂತ್ರಿಕ ಕಾರಣಗಳಿಂದ ಸೇರ್ಪಡೆಗೊಂಡಿರಲಿಲ್ಲ. ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 147 ಸೇಅನೇ 2014, ದಿನಾಂಕ:27.01.2015ರಲ್ಲಿ ಮುಕ್ತ ವಿಶ್ವವಿದ್ಯಾನಿಲಯ ನಡೆಸುವ 10+2ಪರೀಕ್ಷೆಯನ್ನು ನೇಮಕಾತಿಗೆ ಪರಿಗಣಿಸಬಾರದೆಂದು ನಿರ್ದೇಶನವಿರುವುದನ್ನು ಹಾಗೂ ಸಿ.ಬಿ.ಎಸ್.ಸಿ ಅಭ್ಯರ್ಥಿಗಳನ್ನು ಸೇರ್ಪಡೆಗೊಳಿಸುವ ಬಗ್ಗೆ ಪರಿಶೀಲಿಸಿ ಪುನ: 1:5ರ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ತೀರ್ಮಾನಿಸಿ, ಬೆಂಗಳೂರು ಎನ್.ಐ.ಸಿ ಕೇಂದ್ರ ಕಛೇರಿಯವರಿಂದ ಪರಿಷ್ಕೃತ 1:5ರ ಅನುಪಾತದ ತಾತ್ಕಾಲಿಕ ಆಯ್ಕೆ ಪಡೆದು ಅಂತರ ಜಾಲದಲ್ಲಿ ಪ್ರಕಟಪಡಿಸಿ, ಅದರಂತೆ ಅಭ್ಯರ್ಥಿಗಳನ್ನು ದಿನಾಂಕ:20.07.2016 ಮತ್ತು 21.07.2016 ಮತ್ತು 07.10.2016ರಂದು ದಾಖಲಾತಿಗಳ ಪರಿಶೀಲನೆಗೆ ಕರೆದು, ಪರಿಶೀಲನೆ ಮಾಡಲಾಗಿದೆ. ಹಾಜರಾಗಿದ್ದು ನಿಯಮಾನುಸಾರ ಅರ್ಹರಿದ್ದ ಅಭ್ಯರ್ಥಿಗಳನ್ನು ಪರಿಗಣಿಸಿ 1:1ರ ಅನುಪಾತದ ಆಯ್ಕೆ ಪಟ್ಟಿಯನ್ನು ಈ ಮುಖ್ಯೆನ ಪ್ರಕಟಿಸಿದೆ.

ಈ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಇದ್ದರೆ ಅಭ್ಯರ್ಥಿಗಳು ದಿನಾಂಕ:10.11.2016ರ ಸಂಜೆ 5.30ರೊಳಗೆ ಪೂರಕ ದಾಖಲಾತಿಗಳೊಂದಿಗೆ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಗ್ರಾಮಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ, ಮಂಡ್ಯ ರವರಿಗೆ ಸಲ್ಲಿಸತಕ್ಕದ್ದು. ಅವಧಿ ಮುಕ್ತಾಯವಾದ ಬಳಿಕ ನೇರ ಅಥವಾ ಅಂಚೆ ಮೂಲಕ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ ಆಯ್ಕೆ ಪಟ್ಟಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ಈ ಕೆಳಕಂಡ ಮೂಲ ದಾಖಲಾತಿಗಳನ್ನು ಮುದ್ದಾಂ ಈ ಕಛೇರಿಗೆ ದಿನಾಂಕ:10.11.2016ರೊಳಗೆ ಸಲ್ಲಿಸತಕ್ಕದ್ದು.

1. ಪಿ.ಯು.ಸಿ ಹಾಗೂ ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ
2. ಜಾತಿ ಪ್ರಮಾಣ ಪತ್ರ
3. ಮೀಸಲಾತಿ ಕೋರಿರುವ ಸಂಬಂಧ ಅಗತ್ಯ ದಾಖಲೆಗಳು

ದಾಖಲೆಗಳ ನೈಜತೆ ಪರಿಶೀಲನೆ ಹಾಗೂ ಆಕ್ಷೇಪಣೆ ಪರಿಶೀಲನೆಯ ತರುವಾಯ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು.

ಅಧ್ಯಕ್ಷರು
ಗ್ರಾಮ ಲೆಕ್ಕಿಗರ ಆಯ್ಕೆ ಮತ್ತು ನೇರನೇಮಕಾತಿ ಪ್ರಾಧಿಕಾರ,
ಹಾಗೂ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ